# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಯಲಹಂಕ ವಲಯ

### ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಯಲಹಂಕ ಉಪನಗರ ಉಪ ವಿಭಾಗ

### ವಾರ್ಡ್ ನಂ. 04ರ (ಯಲಹಂಕ ಉಪನಗರ) ವಾರ್ಡ್ ಕಮಿಟಿ ಸಭೆಯ ನಡವಳಿಗಳು.

ದಿನಾಂಕ: 19-12-2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ-04 ಯಲಹಂಕ ಉಪನಗರ ವಾರ್ಡ್ ಸಮಿತಿಯ ಮಾನ್ಯ ನೊಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ಉಪನಗರ ಉಪ ವಿಭಾಗದ ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ಮನೋಜ್ ಜೈನ್, ಐ.ಎ.ಎಸ್ | ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-04) |
| 02 | ಶ್ರೀ.ರಾಜೇಂದ್ರ ನಾಯಕ್ | ಕಾ.ಅ ಬಿ.ಬಿ.ಎಂ.ಪಿ (ವಿದ್ಯುತ್) ಗೈರು ಹಾಜರು |
| 03 | ಶ್ರೀ.ದೇವೇಂದ್ರ ನಾಯಕ್ | ಕಾ.ಅ ಬಿ.ಬಿ.ಎಂ.ಪಿ (ಯೋಜನೆ) ಯಲಹಂಕ ವಲಯ |
| 04 | ಶ್ರೀ.ಹೆಚ್.ಪಿ.ಸಚಿನ್ | ಸ.ಕಾ.ಅ, ಬಿ.ಬಿ.ಎಂ.ಪಿ (ಯ.ಉ.ಉ.ವಿ) |
| 05 | ಶ್ರೀ.ಹೆಚ್.ಕೆ.ದೇವರಾಜ್ | ಸ.ಕಾ.ಅ (ರೋಡ್ ಇನ್‌ಫ್ರಸ್ಟಚರ್ಸ್ ಬಿ.ಬಿ.ಎಂ.ಪಿ) |
| 06 | ಶ್ರೀ.ಶ್ರೀನಿವಾಸ ಟಿ | ಸ.ಕಾ.ಅ, ಬಿ.ಬಿ.ಎಂ.ಪಿ (ರಾಜಕಾಲುವೆ) |
| 07 | ಶ್ರೀ.ಶ್ರೀನಿವಾಸ ಜೆ.ಎನ್ | ಸ.ಅ ಬಿ.ಬಿ.ಎಂ.ಪಿ (ರಾಜಕಾಲುವೆ) ಗೈರು ಹಾಜರಿ |
| 08 | ಶ್ರೀ.ಪ್ರಕಾಶ್ ಕೆ.ವಿ. | ಸ.ಕಾ.ಅ ಬಿ.ಬಿ.ಎಂ.ಪಿ. (ಕೆರೆಗಳು) ಗೈರು ಹಾಜರು |
| 09 | ಶ್ರೀ.ಪ್ರಭುದ್ದ ಕಾಂಬ್ಲೆ | ಸ.ಕಾ.ಅ ಬಿ.ಬಿ.ಎಂ.ಪಿ (ಎಸ್.ಡಬ್ಲ್ಯೂ.ಎಂ) ಗೈರು ಹಾಜರು |
| 10 | ಶ್ರೀಮತಿ. ಅನುಸೂಯ ಡಿ | ಸ.ಕಾ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಒಳಚರಂಡಿ ವಿಭಾಗ |
| 11 | ಶ್ರೀ.ಪಿ.ಎಂ.ಮಲ್ಯಾದ್ರಿ | ತೋಟಗಾರಿಕೆ ಪರಿವೀಕ್ಷಕರು (ತೋಟಗಾರಿಕೆ) ಗೈರು ಹಾಜರಿ |
| 12 | ಶ್ರೀ.ರಾಮಸಂಜೀವಯ್ಯ | ಸ.ಅ ವಾರ್ಡ್ ನಂ-04 ಹಾಗೂ ಕಾರ್ಯದರ್ಶಿಗಳು. |
| 13 | ಶ್ರೀ.ವಿನಾಯಕ ಕೆ.ಎಂ | ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 14 | ಶ್ರೀ.ಆನಂದ್ ಎ | ಸ.ಅ (ಬೇಸ್ಕಾಂ) |
| 15 | ಠಾಣಾಧಿಕಾರಿಗಳು ಯಲಹಂಕ ಉಪನಗರ ಪೋಲಿಸ್ ಠಾಣೆ | ಗೈರು ಹಾಜರು |

| | | |
|---|---|---|
| 16 | ಶ್ರೀ.ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ ವಾರ್ಡ್ -4 (ಗೈರು ಹಾಜರು) |
| 17 | ಶ್ರೀಮತಿ. ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ (ಗೈರು ಹಾಜರು) |
| 18 | ಶ್ರೀ.ಶೇಖರ್ | ಅರಣ್ಯ ಬಿ.ಬಿ.ಎಂ.ಪಿ ಯಲಹಂಕ ವಲಯ |
| 19 | ಶ್ರೀ.ಎಸ್.ಎಂ.ಪ್ರಸಾದ್ | ಸೆಕ್ಟರ್ ಅಫೀಸರ್ ಕೋವಿಡ್-19 |
| 20 | ಶ್ರೀ.ಲಕ್ಷ್ಮಿನಾರಾಯಣಪ್ಪ | ಜಾನುವಾರು ಅಧಿಕಾರಿ ಬಿ.ಬಿ.ಎಂ.ಪಿ ಯಲಹಂಕ ವಲಯ |
| 21 | ಶ್ರೀ.ಎಸ್.ಎನ್.ಪ್ರದೀಪ್ ಕುಮಾರ್ | ಗುತ್ತಿಗೆದಾರರು (ವಿದ್ಯುತ್) |
| 22 | ಶ್ರೀ.ಡಿ.ಲೋಕೇಶ್ | ಆರ್.ಐ (ವಾರ್ಡ್ ನಂ-04) |
| 23 | ಶ್ರೀ.ಮನುಮೂರ್ತಿ | ಟಿ.ಐ (ವಾರ್ಡ್ ನಂ-04) |
| 24 | ಶ್ರೀಮತಿ. ಪೂರ್ಣಿಮ ಪಿ | ಸ.ಅ (ಕೆರೆಗಳು) ಬಿ.ಬಿ.ಎಂ.ಪಿ |
| 25 | ಶ್ರೀ.ಕೃಷ್ಣಪ್ಪ ಸಿ. | ಟ್ರಾಫಿಕ್ (ಎ.ಎಸ್.ಐ) |
| 26 | ಶ್ರೀಮತಿ. ಪಾವನಾ ನಾಗತಿ | ಸ.ಅ (ಯೋಜನೆ) ಬಿ.ಬಿ.ಎಂ.ಪಿ |
| | **ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/** | |
| 01 | ಶ್ರೀ.ಎಂ.ಸತೀಶ್ | ಮಾಜಿ ಸದಸ್ಯರು (ಬಿ.ಬಿ.ಎಂ.ಪಿ) |
| 02 | ಶ್ರೀ.ಜಿ.ರವಿ | ಆರ್,ಡಬ್ಲ್ಯೂ.ಎ ಎ ಸೇಕ್ಟರ್ |
| 03 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ಆರ್,ಡಬ್ಲ್ಯೂ.ಎ ಬಿ. ಸೇಕ್ಟರ್ |
| 04 | ಶ್ರೀ.ವಿಜಯ್ ಕುಮಾರ್ | ಆರ್,ಡಬ್ಲ್ಯೂ.ಎ ಬಿ. ಸೇಕ್ಟರ್ |
| 05 | ಶ್ರೀ.ರಕ್ಷಿತ್ | ಐ.ಟಿ.ಸಿ (ಒಣ ಕಸ ಕೇಂದ್ರ) |
| 06 | ಶ್ರೀ.ಅಸ್ಮಿತ್ ದೊರೆ | (ಕಾರ್ಯದರ್ಶಿ) ಪೂರ್ವಂಕರ |
| 07 | ಶ್ರೀ.ಕೆ.ಟಿ.ಗಂಗಾಧರ್ | ಆರ್.ಡಬ್ಲ್ಯೂ.ಎ |
| 08 | ಶ್ರೀ.ಎನ್.ಮಣಿ | ಆರ್.ಡಬ್ಲ್ಯೂ.ಎ |
| 09 | ಶ್ರೀ.ವಿನೋದ್ ಆರ್ | ಆರ್.ಡಬ್ಲ್ಯೂ.ಎ |
| 10 | ಶ್ರೀ.ಎಸ್.ಎಂ.ಪ್ರಸಾದ್ | ಆರ್.ಡಬ್ಲ್ಯೂ.ಎ |
| 11 | ಶ್ರೀ.ಅಶ್ವಿನ್ ಕುಮಾರ್ | ಆರ್.ಡಬ್ಲ್ಯೂ.ಎ |
| 12 | ಶ್ರೀ.ಭರತ್ | ಆರ್.ಡಬ್ಲ್ಯೂ.ಎ |
| 13 | ಶ್ರೀ.ನಿಶಾ | ಆರ್.ಡಬ್ಲ್ಯೂ.ಎ |

ಶ್ರೀ. ಸಚಿನ್ ಹೆಚ್.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು

ಶ್ರೀ. ಮನೋಜ್ ಜೈನ್ ಐ.ಎ.ಎಸ್, ಮಾನ್ಯ ವಿಶೇಷ ಆಯುಕ್ತರು ಬಿ.ಬಿ.ಎಂ.ಪಿ (ಯೋಜನೆ) ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ:05-12-2020 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-04ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಮರದ ಎಲೆಗಳನ್ನು ಪುಡಿ ಮಾಡಲು ಹಾಗೂ ಸಣ್ಣ ಸಣ್ಣ ರೆಂಬೆಕೊಂಬೆಗಳನ್ನು ಕತ್ತರಿಸಲು ಹಾಳಿ ಇರುವ Shredders ಯಂತ್ರವನ್ನು ದುರಸ್ಥಿಗೊಳಿಸುವ ಬಗ್ಗೆ ಆರ್.ಡಬ್ಲ್ಯೂ.ಎ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ತೋಟಗಾರಿಕೆ ಇಲಾಖೆಯ Horticulture inspector ರವರಿಗೆ ಸೂಚಿಸಿದರು. | ತೋಟಗಾರಿಕೆ ವಿಭಾಗ (ಶ್ರೀ.ಮಲ್ಯಾಧ್ರಿ) |
| 02 | ವಾರ್ಡ್ ನಂ-04 ಕೆಂಪೇಗೌಡ ಪಾರ್ಕನಲ್ಲಿರುವ ಬೋರ್‌ವೆಲ್ ಅನ್ನು ದುರಸ್ಥಿಗೊಳಿಸುವ ಬಗ್ಗೆ. ಆರ್.ಡಬ್ಲ್ಯೂ.ಎ ಬಿ. ಸೇಕ್ಟರ್ ರವರು ಸಭೆಯಲ್ಲಿ ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಬೋರ್‌ವೆಲ್ ದುರಸ್ಥಿಗೊಳಿಸಲು ತೋಟಗಾರಿಕೆ ಇಲಾಖೆಯ Horticulture inspector ರವರಿಗೆ ಸೂಚಿಸಿದರು. | ತೋಟಗಾರಿಕೆ ವಿಭಾಗ (ಶ್ರೀ.ಮಲ್ಯಾಧ್ರಿ) |
| 03 | 8ನೇ ಬಿ' ಮುಖ್ಯರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ದುರಸ್ಥಿಗೊಳಿಸುವ ಬಗ್ಗೆ ಸ್ಥಳೀಯ ನಿವಾಸಿಗಳು ಕೋರಿದರು | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಶ್ರೀ.ವಿನಾಯಕ್ ಕೆ.ಎಂ |
| 04 | ಶಾರದನಗರದಲ್ಲಿ ಬೊರ್‌ವೆಲ್‌ಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿರುವುದಿಲ್ಲ ಎಂದು ಶ್ರೀ.ಬೋರೆಗೌಡ ಆರ್.ಡಬ್ಲೂ.ಎ ರವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಹಾಗೂ ಬೆಸ್ಕಾಂ ಅಧಿಕಾರಿಗಳ ಜೊತೆ ಜಂಟಿ ತಪಾಸಣೆ ಮಾಡಿ ಬೋರ್‌ವೆಲ್‌ಗಳ ಸ್ಥಳದ ವಿವರ, ಕಾರ್ಯ ನಿರ್ವಹಿಸುತ್ತಿರುವ ಮತ್ತು ನಿಂತು ಹೋಗಿರುವ ಬೊರ್‌ವೆಲ್‌ಗಳ ಬಗ್ಗೆ ಹಾಗೂ ಆರ್.ಆರ್.ಸಂಖ್ಯೆಗಳನ್ನು | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಶ್ರೀ.ವಿನಾಯಕ್ ಕೆ.ಎಂ ಮತ್ತು ಸಹಾಯಕ ಅಭಿಯಂತರರು (ಬೆಸ್ಕಾಂ) ಶ್ರೀ.ಆನಂದ್ ಎ |

| | | | |
|---|---|---|---|
| | | ದೃಡಪಡಿಸಿಕೊಂಡು ಸಂಪೂರ್ಣ ವರದಿ ಸಲ್ಲಿಸಲು ಸೂಚಿಸಿದರು. ಹಾಗೂ ಡ್ರೈ ಆಗಿರುವ ಬೋರ್‌ವೆಲ್‌ಗಳನ್ನು ಮುಚ್ಚುವಂತೆ (Defunct) ನೋಡೆಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿದರು. | |
| 05 | ಕೆ.ಹೆಚ್.ಬಿ ಹೈ ರೈಸ್ ಬಿಲ್ಡಿಂಗ್ ಎ ಸೆಕ್ಟರ್ 6ನೇ ಎ ಮುಖ್ಯರಸ್ತೆಯಲ್ಲಿರುವ ಚರಂಡಿಯ ಮಧ್ಯಭಾಗದಲ್ಲಿ ಬೇಸ್ಕಾಂ ವಿದ್ಯುತ್ ಸಂಪರ್ಕ ಕಲ್ಪಿಸುವ ಬಾಕ್ಸ್‌ಅನ್ನು ಅಳವಡಿಸಿರುವುದನ್ನು ತೆರವುಗೊಳಿಸಲು ಆರ್.ಡಬ್ಲ್ಯೂ.ಎ ಜಿ. ರವಿ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಬೇಸ್ಕಾಂ ಇಲಾಖೆ ಯ ಅಧಿಕಾರಿಗಳಿಗೆ ಸೂಚಿಸಿದರು. | ಸಹಾಯಕ ಅಭಿಯಂತರರು (ಬೇಸ್ಕಾಂ) ಶ್ರೀ.ಆನಂದ್ ಎ |
| 06 | ಸಾರ್ವಜನಿಕ ಶೌಚಾಲಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿರುವುದಿಲ್ಲ ಎಂಬುದಾಗಿ ಆರ್.ಡಬ್ಲ್ಯೂ.ಎ ರವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಪಾರ್ಕನ ಒಳಭಾಗದಲ್ಲಿರುವ ಸಾರ್ವಜನಿಕ ಶೌಚಾಲಯಗಳನ್ನು ನಿರ್ವಹಣೆ ಮಾಡಲು ಸೂಚಿಸಿದರು. ಮತ್ತು ಸಾರ್ವಜನಿಕ ಶೌಚಾಲಯಗಳನ್ನು ಹೊಸದಾಗಿ ನಿರ್ಮಾಣ ಮಾಡಲು ಸ್ಥಳ ಹಾಗೂ ನಿರ್ವಹಣೆ ಮಾಡುವುದಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು. | ಸ.ಕಾ.ಅ (ಎಸ್.ಡಬ್ಲ್ಯೂ.ಎಂ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ–04 |
| 07 | ಮನೆ ಮನೆಗಳಿಂದ ಹಸಿಕಸ ವನ್ನು ಸಂಗ್ರಹಿಸಲು 750 ಮನೆಗಳಿಗೆ ಒಂದು ಆಟೋ ಟಿಪ್ಪರ್‌ನಂತೆ ವಾರ್ಡ್ ನಂ –04ರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಬ್ಲಾಕ್‌ಗಳನ್ನು ಪುನರ್ ವಿಂಗಡಿಸುವುದು ಹಾಗೂ ಹೆಚ್ಚುವರಿ ಬ್ಲಾಕ್‌ಗಳಲ್ಲಿ ಹಸಿಕಸ ಸಂಗ್ರಹಿಸಲು 5 ಸಂಖ್ಯೆ ಆಟೋಗಳನ್ನು ಹೆಚ್ಚುವರಿಯಾಗಿ ಪಡೆಯಲು ವಾರ್ಡ್ ಕಮಿಟಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಮಾನ್ಯ ನೋಡೆಲ್ ಅಧಿಕಾರಿಗಳು ಸೂಚಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಎಂ ರವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಎಂ |

| | | | |
|---|---|---|---|
| 08 | ಯಲಹಂಕ ಉಪನಗರ 3ನೇ ಎ ಅಡ್ಡರಸ್ತೆ ಎ ಸೇಕ್ಟರ್ ಶೇಷಾದ್ರಿಪುರಂ ಕಾಲೇಜ್ ಹತ್ತಿರ ಹಾಗೂ ಮದರ್ ಡೈರಿ ವೃತ್ತದಲ್ಲಿ ಹಾಗೂ ಇನ್ನೀತರೆ ಸ್ಥಳಗಳಲ್ಲಿ ಪೇ ಅಂಡ್ ಯೂಸ್ ಮುಖಾಂತರ ಶುಲ್ಕ ವಿಧಿಸಲು ದ್ವಿ ಚಕ್ರ ವಾಹನಗಳು ಹಾಗೂ ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಸಂಬಂದಿಸಿದ ಟ್ರಾಫಿಕ್ ಠಾಣಾಧಿಕಾರಿಗಳನ್ನು ಸಂಪರ್ಕಿಸಿ ಈ ವಿಷಯದ ಬಗ್ಗೆ ಚರ್ಚಿಸಿ ಪ್ರಸ್ತಾವನೆಯನ್ನು ಟಿ.ಇ.ಸಿ. ಸೆಲ್ ಬಿ.ಬಿ.ಎಂ.ಪಿ ರವರ ಅನುಮೋದನೆಗೆ ಸಲ್ಲಿಸುವಂತೆ ನೊಡೆಲ್ ಅಧಿಕಾರಿಗಳು ಸೂಚಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಲಹಂಕ ಉಪನಗರ ಉಪ ವಿಭಾಗ) ರವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರು (ವಾರ್ಡ್-4) |
| 09 | ಬಲ್ಕ್ ವೇಸ್ಟ್ ಜನರೇಟರ್ಸ್‌ನ ಸಂಗ್ರಹಣೆಗೆ ಸಂಬಂದಿಸಿದಂತೆ ಬಿ.ಬಿ.ಎಂ.ಪಿ ಕೇಂದ್ರ ಕಛೇರಿಯಲ್ಲಿ Empanelled Venders ನೊಂದಣಿ ಪ್ರಕ್ರಿಯೆ ನಿರಂತರವಾಗಿರಬೇಕೆಂದು ನೊಡೆಲ್ ಅಧಿಕಾರಿಗಳು ಸೂಚಿಸಿದರು | ಆರೋಗ್ಯಾಧಿಕಾರಿಗಳು (ಯಲಹಂಕ ವಲಯ) | ಹಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ ನಂ-04) |
| 10 | 16ನೇ ಬಿ ಅಡ್ಡರಸ್ತೆಯಲ್ಲಿ ಒಳಚರಂಡಿಯ ಕೊಳವೆ ಸಾಲುಗಳನ್ನು ಅಳವಡಿಸಲು ರಸ್ತೆ ಕತ್ತರಿಸಿದ್ದು ಇದರಿಂದ ಸಾರ್ವಜನಿಕರ ಒಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗುತ್ತಿರುವುದಾಗಿ ಆರ್.ಡಬ್ಲ್ಯೂ.ಎ ರವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ನೊಡೆಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಒಳಚರಂಡಿ ವಿಭಾಗರವರಿಗೆ ಅಗೆದಿರುವ ರಸ್ತೆಯನ್ನು ಪುನರ್ ನಿರ್ಮಾಣ ಮಾಡಿ ಡಾಂಬರಿಕರಣ ಮಾಡಲು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಬಿಯಂತರರು ಒಳಚರಂಡಿ ವಿಭಾಗ (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |
| 11 | 6ನೇ ಬಿ ಅಡ್ಡರಸ್ತೆಯಲ್ಲಿ ಶೊಲ್ಡರ್ ಡ್ರೈನ್‌ಗಳನ್ನು ನಿರ್ಮಾಣ ಮಾಡುವಂತೆ ಆರ್.ಡಬ್ಲ್ಯೂ.ಎ ಶ್ರೀ.ವಿಜಯ್ ಕುಮಾರ್ ರವರು ಸಭೆಯಲ್ಲಿ ಕೋರಿದರು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮರು ಡಾಂಬರಿಕರಣ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಹಾಗೂ ಶೋಲ್ಡ್‌ರ್ ಡ್ರೈನ್‌ಗಳನ್ನು ನಿರ್ಮಾಣ ಮಾಡುತ್ತೇವೆಂದು ಸಭೆಯಲ್ಲಿ ಸಹಾಯಕ ಅಭಿಯಂತರರು ವಾರ್ಡ್ ನಂ -04 ರವರು ಹೇಳಿದರು. | ಸಹಾಯಕ ಅಭಿಯಂತರರು (ವಾರ್ಡ್-4) |

| | | | |
|---|---|---|---|
| 12 | ರೆವಿನ್ಯೂ ಅಧಿಕಾರಿಗಳಿಗೆ ಪೂರ್ವಾಂಕರ ವಸತಿ ಸಂಕೀರ್ಣ ಕಟ್ಟಡದಲ್ಲಿ ಖಾತಾಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಹಾಗೂ ಕಂದಾಯ ವಸೂಲು ಮಾಡುವಂತೆ ಕಂದಾಯ ಅಧಿಕಾರಿಗಳಿಗೆ ನೊಡೆಲ್ ಅಧಿಕಾರಿಗಳು ಸೂಚಿಸಿದರು. | ಕಂದಾಯ ಅಧಿಕಾರಿಗಳು (ಯಲಹಂಕ ವಿಭಾಗ) | ಕಂದಾಯ ಅಧಿಕಾರಿಗಳು (ಯಲಹಂಕ ವಿಭಾಗ) |
| 13 | 14ನೇ ಬಿ ಅಡ್ಡರಸ್ತೆಯಲ್ಲಿ ಹಾಲಿ ಇರುವ ಒಳಚರಂಡಿ ಕೊಳವೆ ಸಾಲುಗಳು ಬ್ಲಾಕ್ ಆಗಿರುವುದರಿಂದ ಇದನ್ನು ತೆಗೆದು ಹೊಸದಾಗಿ ಒಳಚರಂಡಿ ಕೊಳವೆ ಸಾಲುಗಳನ್ನು ಅಳವಡಿಸುವಂತೆ ಆರ್.ಡಬ್ಲ್ಯೂ.ಎ ಶ್ರೀ.ಮಾದೇಶ್ ವರ್ಮಾ ರವರು ಸಭೆಯಲ್ಲಿ ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಎಂ ರವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಬಿಯಂತರರು ಒಳಚರಂಡಿ ವಿಭಾಗ (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |

- ಶ್ರೀಮತಿ. ನೇತ್ರಾವತಿ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-4 ರವರನ್ನು ಬೇರೆ ವಾರ್ಡ್‌ಗೆ ವರ್ಗಾವಣೆ ಮಾಡಿ ಇವರ ಜಾಗಕ್ಕೆ ಮತ್ತೊಬ್ಬ ಕಿರಿಯ ಆರೋಗ್ಯ ಪರಿವೀಕ್ಷಕರನ್ನು ನೇಮಿಸುವಂತೆ ಸಭೆಯಲ್ಲಿ ತಿರ್ಮಾನಿಸಲಾಯಿತು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ.ರಾಮಸಂಜೀವಯ್ಯ
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ-04

ಶ್ರೀ.ಮನೋಜ್‌ಜೈನ್, ಐ.ಎ.ಎಸ್.
ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ-04

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ (ವಿದ್ಯುತ್) ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಸ್ಕಾಂ/ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಲಹಂಕ ಉಪ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಕಡತಕ್ಕೆ.